# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1074 |
| ಸದಸ್ಯರ ಹೆಸರು | ಶ್ರೀ ಎಂ.ಎಲ್.ಅನಿಲ್ ಕುಮಾರ್ |
| ಉತ್ತರಿಸುವ ದಿನಾಂಕ | 18-12-2024 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ದೇವಲಾಪುರ ಹೋಬಳಿ ಕುಡುಗಬಾಳು ಗ್ರಾಮ ದಲ್ಲಿರುವ ಶ್ರೀ ರಾಮಲಿಂಗೇಶ್ವರ ದೇವಸ್ಥಾನವು ಮುಜರಾಯಿ ಇಲಾಖೆಯ ಸ್ವಾಧೀನದಲ್ಲಿದೆಯೇ; | ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು ದೇವಲಾಪುರ ಹೋಬಳಿ ಕುಡುಗಬಾಳು ಗ್ರಾಮದಲ್ಲಿರುವ ಶ್ರೀ ರಾಮಲಿಂಗೇಶ್ವರ ದೇವಸ್ಥಾನವು ಮುಜರಾಯಿ ಇಲಾಖೆಯ ಸ್ವಾಧೀನದಲ್ಲಿದೆ. |
| ಆ) | ಸ್ವಾಧೀನದಲ್ಲಿದ್ದಲ್ಲಿ, ದೇವಸ್ಥಾನದ ಅಧೀನದಲ್ಲಿರುವ ಚರ ಮತ್ತು ಸ್ಥಿರ ಸ್ವತ್ತುಗಳು ಯಾವುವು; ಈ ಸ್ವತ್ತುಗಳು ಎಷ್ಟು ವರ್ಷಗಳಿಂದ ದೇವಸ್ಥಾನದ ಅಧೀನದಲ್ಲಿದೆ; (ಸಂಪೂರ್ಣವಾದ ಮಾಹಿತಿ ನೀಡುವುದು) | ಕುಡುಗಬಾಳು ಗ್ರಾಮದಲ್ಲಿರುವ ಶ್ರೀ ರಾಮಲಿಂಗೇಶ್ವರ ದೇವಾಲಯಕ್ಕೆ ಸೇರಿದ ಸ್ಥಿರ ಸ್ವತ್ತುಗಳ ವಿವರ ಕೆಳಕಂಡಂತೆ ಇರುತ್ತದೆ. (see tables below) |

| ಸ್ವತ್ತು ಇರುವ ಸ್ಥಳ | ಸರ್ವೆ ನಂಬರ್ | ಎಕರೆ | ಗುಂಟೆ |
|---|---|---|---|
| ಕುಡುಗಬಾಳು | 7 | 0 | 30 |
| ಕುಡುಗಬಾಳು | 5 | 0 | 11 |
| ಕುಡುಗಬಾಳು | 64 | 7 | 39 |
| ದೇವಾಲಯದ ಕಟ್ಟಡ ಕಣ್ಣಳತೆಯಂತೆ ಅಂದಾಜು 60 ಅಡಿ ಉದ್ದ 30 ಅಡಿ ಅಗಲ ಇರುತ್ತದೆ. | | | |

ಚರ ಆಸ್ತಿಗಳ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂ | ಅಭರಣಗಳು | ತೂಕ |
|---|---|---|
| 1 | ಚಿನ್ನ | - |
| 2 | ಬೆಳ್ಳಿ | ಅಂದಾಜು 450 ಗ್ರಾಂ |
| 3 | ಕಂಚು | ಅಂದಾಜು 2 ಕೆ.ಜಿ |

| | ಪ್ರಶ್ನೆ | ಉತ್ತರ |
|---|---|---|
| ಇ) | ಈ ಸ್ವತ್ತುಗಳು ಒತ್ತುವರಿಯಾಗಿರುವುದು ಅಥವಾ ಅನಧಿಕೃತ ವ್ಯಕ್ತಿಗಳು ಸ್ವಾಧೀನಾನುಭವಕ್ಕೆ ಒಳಪಡಿಸಿಕೊಂಡಿರುವುದು ನಿಜವೇ; ಹಾಗೂ ಒತ್ತುವರಿಗೊಳಪಟ್ಟಿರುವ ಜಮೀನುಗಳು ಏನಾದರೂ ಅಕ್ರಮವಾಗಿ ಮಾರಾಟವಾಗಿದೆಯೇ; ಮಾರಾಟವಾಗಿದ್ದಲ್ಲಿ, ಯಾರ ಹೆಸರಿಗೆ ಮಾರಾಟವಾಗಿದೆ? (ಸಂಪೂರ್ಣವಾದ ದಾಖಲೆ ಸಹಿತ ಮಾಹಿತಿ ನೀಡುವುದು) | ಶ್ರೀ ರಾಮಲಿಂಗೇಶ್ವರ ದೇವಸ್ಥಾನದ ಜಮೀನುಗಳನ್ನು ಅಳತೆ ಮಾಡಿ ಹದ್ದು ಬಸ್ತು ಗುರುತಿಸಲು ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ನಿರ್ದೇಶನ ನೀಡಲಾಗಿರುತ್ತದೆ. ಅದರನ್ವಯ ಅಳತೆ ಕಾರ್ಯ ಪೂರ್ಣಗೊಳಿಸಿ, ಒತ್ತುವರಿ ಕಂಡು ಬಂದಲ್ಲಿ, ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು. ಪ್ರಸ್ತಾಪಿತ ದೇವಸ್ಥಾನದ ಜಮೀನುಗಳು ಅಕ್ರಮವಾಗಿ ಪರಭಾರೆಯಾಗಿರುವುದು ಕಂಡು ಬಂದಿರುವುದಿಲ್ಲ. |

ಸಂಖ್ಯೆ: ಕಂಇ 188 ಮುಸಪ್ರ 2024

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು